## ಡಬ್ಬಿಂಗ್ ಬೇಡ

ಲಾಕ್‌ಡೌನ್ ಅವಧಿಯಲ್ಲಿ ಶೂಟಿಂಗ್ ಇಲ್ಲದೇ ಅನಿವಾರ್ಯವಾಗಿ ಕನ್ನಡ ವಾಹಿನಿಗಳು ಡಬ್ಬಿಂಗ್ ಸಿನಿಮಾ ಹಾಗೂ ಧಾರಾವಾಹಿಗಳನ್ನು ಪ್ರದರ್ಶಿಸಲಾರಂಭಿಸಿದವು. ಆದರೆ ಇದೇ ಚಾಳಿಯಿಂದ ಸಾಲು ಸಾಲು ಡಬ್ಬಿಂಗ್ ಧಾರಾವಾಹಿಗಳು ಕಿರುತೆರೆಯನ್ನು ಆಕ್ರಮಿಸಲಾರಂಭಿಸಿವೆ. ಕಡಿಮೆ ಹಣದಲ್ಲಿ ಧಾರಾವಾಹಿಗಳು ಭಾಷಾಂತರವಾಗುತ್ತವೆ. ಸಂಭಾಷಣೆ ಅನುವಾದಕರು ಹಾಗೂ ಡಬ್ಬಿಂಗ್ ಕಲಾವಿದರಿಗೆ ಮಾತ್ರ ಅನುಕೂಲವಾಗುತ್ತಿದೆ. ಇದರಿಂದ ಅನೇಕ ನಿರ್ದೇಶಕರು, ಕಲಾವಿದರು, ತಂತ್ರಜ್ಞರು, ಕಾರ್ಮಿಕರು ನಿರುದ್ಯೋಗಿಗಳಾಗುವ ಸಂಭವವಿದೆ. ಕೂಡಲೇ ಈ ಡಬ್ಬಿಂಗ್ ಪೆಡಂಭೂತಕ್ಕೆ ಕಡಿವಾಣ ಹಾಕಿ, ಕನ್ನಡ ಧಾರಾವಾಹಿಗಳ ಗುಣಮಟ್ಟ ಹೆಚ್ಚಿಸುವುದು ಇದಕ್ಕೆ ಇರುವ ಪರಿಹಾರ ಎಂದು ನನಗೆ ಅನ್ನಿಸುತ್ತದೆ.

—ಕೆ. ಶ್ರೀನಿವಾಸರಾವ್ ಹರಪನಹಳ್ಳಿ

## ಧಾರಾವಾಹಿಗಳಿಗೂ ಕೊರೊನಾ!

ನಿಯಮ ಪಾಲಿಸದಿದ್ದರೆ ಮತ್ತೆ ಧಾರಾವಾಹಿ ನಿಂತು ಹೋಗಬಹುದೆಂಬ ಹೆದರಿಕೆಯಿಂದಲೇ ಕೊರೊನಾ ನಿಯಮ ಪಾಲಿಸುತ್ತಿದ್ದಾರೆ ಎನ್ನಿಸುತ್ತದೆ. ಅಗತ್ಯವಿಲ್ಲದೆಡೆ ಅಡಿ ಬರಹ ಹಾಕುವ ಮೂಲಕ ಕುಂಬಳಕಾಯಿ ಕಳ್ಳರ ನೆನಪು ಮೂಡಿಸುತ್ತಿದ್ದಾರೆ. ನಿಜವಾದ ಕಾಳಜಿ ಎಲ್ಲಿಯೂ ಇಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಕತೆಗಳಿಗೆ ಏಕೆ ಕೊರೊನಾ ವಕ್ಕರಿಸಿತೆಂಬುದೇ ಸೋಜಿಗದ ಸಂಗತಿ. ಕೆಲವರು ಇದ್ದಕಿದ್ದಂತೆ ವಾರಿಯರ್ಸ್ ಪಾತ್ರ ಸೃಷ್ಟಿ ಮಾಡಿದರೆ, ಕೆಲವರು ನಾಯಕಿಗೇ ಕೊರೊನಾ ಬರಿಸಿದ್ದಾರೆ. ಹೆಂಡತಿಯ ಮೇಲಿನ ಪ್ರೀತಿಯಿಂದ ಪಾಸಿಟಿವ್ ರಿಪೋರ್ಟ್ ಅನ್ನು ನೆಗೆಟಿವ್ ಎಂದೂ ಹೇಳಿಸಿದ್ದಾರೆ. ಏನೇ ಆಗಲಿ ತಮ್ಮ ಕತೆಯಲ್ಲಿ ಕೊರೊನಾ ಇರಲೇಬೇಕು ಎಂಬ ಹಟ ತೋರುತ್ತಿದ್ದಾರೆ. ಇಷ್ಟೆಲ್ಲಾ ಮಾಡಿದವರು ಧಾರಾವಾಹಿ ಮಧ್ಯೆ ಬರುವ ಜಾಹೀರಾತಿನಲ್ಲಿ ಮಾತ್ರ ನಾಯಕ ನಾಯಕಿಯರು ತಬ್ಬಿಕೊಳ್ಳುವ, ಹೆಗಲ ಮೇಲೆ ಕೈ ಹಾಕುವ, ಚುಂಬಿಸು ಅಂತರ ರಹಿತ ದೃಶ್ಯಗಳಿಗೆ ಕತ್ತರಿ ಹಾಕಿಲ್ಲ. ದಿನದ ಇಪ್ಪತ್ನಾಲ್ಕು ಗಂಟೆ ವಾರ್ತೆಗಳಲ್ಲಿ ಕೇಳುವ ಮಾರಕ ಕೊರೊನಾ ಕತೆಯನ್ನೇ ಚರ್ವಿತ ಚರ್ವಣವಾಗಿ ಮತ್ತೆ ತೋರಿಸುವ ಅಗತ್ಯವಿದೆಯೇ? ಕೊರೊನಾ ಸದ್ಯಕ್ಕೆ ಮುಗಿಯುವುದಿಲ್ಲ. ಹೀಗೇ ಮುಂದುವರಿದರೆ ಜನರು ವಾರ್ತೆಗಳಂತೆ ಧಾರಾವಾಹಿಗಳನ್ನೂ ದೂರವಿಡುವ ಕಾಲ ಬಂದೀತು.

—ವಾ. ಮುರಳೀಧರ, ತೀರ್ಥಹಳ್ಳಿ

ವಾರದ ಪತ್ರ

## ಮನಮೆಚ್ಚಿದ ಮಹಾಭಾರತ

ವೇದವ್ಯಾಸ ವಿರಚಿತ ಮಹಾಭಾರತ ಸ್ಟಾರ್ ಸುವರ್ಣ ವಾಹಿನಿಯಲ್ಲಿ ಧಾರಾವಾಹಿಯಾಗಿ ಅತ್ಯಂತ ಸೊಗಸಾಗಿ ಪ್ರಸಾರವಾಗುತ್ತಿದೆ. ಮಕ್ಕಳಂತೂ ಪೌರಾಣಿಕ ಕಥಾನಕವನ್ನು ತೆರೆಯ ಮೇಲೆ ಬಹಳ ಖುಷಿಯಾಗಿ ನೋಡುತ್ತಾರೆ. ಡಬ್ಬಿಂಗ್ ಧಾರಾವಾಹಿಯಾದರೂ ನೈಜ ಎನ್ನುವಂತೆ ಮೂಡಿಬರುತ್ತಿರುವುದು ಸೋಜಿಗವೇ ಸರಿ. ಶಕುನಿ ಪಾತ್ರದ ಅಭಿನಯ, ಭಾವನೆಗಳನ್ನು ವ್ಯಕ್ತಪಡಿಸುವ ರೀತಿ ಸೂಪರ್. ಎಲ್ಲ ಪಾತ್ರಗಳಲ್ಲೂ ಕಲಾವಿದನ ನೈಪುಣ್ಯ ಎದ್ದುಕಾಣುವಂತಿದೆ. ನಾವು ಇಂಥ ಕಥೆಗಳನ್ನು ಎಷ್ಟೇ ಹೇಳಿದರೂ 'ವಿಷುವಲ್ ಎಫೆಕ್ಟ್' ಕೊಡುವ ಪರಿಣಾಮವೇ ಬೇರೆ. ಇದರಲ್ಲಿರುವ ಹಾಡುಗಳನ್ನು ಮಕ್ಕಳೂ ಗುನುಗುನಿಸುವಂತಿವೆ.

ಮಹಾಭಾರತ ಕಥೆಯ ಇಂಚು ಇಂಚನ್ನೂ ಮಕ್ಕಳು ಎಂಜಾಯ್ ಮಾಡುವುದಲ್ಲದೆ ಮನಸ್ಸಿನಲ್ಲಿ ನೆನಪಿಟ್ಟುಕೊಳ್ಳಲು ಈ ಧಾರಾವಾಹಿ ಸಹಾಯಕ. ಜೊತೆಗೆ 'ರಾಧಾಕೃಷ್ಣ' ಕೂಡ ಚೆನ್ನಾಗಿದೆ. ಸದ್ಯದಲ್ಲೇ 'ರಾಮಾಯಣ'ವೂ ಪ್ರಸಾರ ಮಾಡುವುದಾಗಿ ವಾಹಿನಿ ತಿಳಿಸಿದೆ. ಆದರೆ ಇದುವರೆಗೆ ಸುದ್ದಿ ಇಲ್ಲ. ರಾಮಾಯಣವನ್ನೂ ಆದಷ್ಟು ಬೇಗ ಪ್ರಸಾರ ಮಾಡಲಿ.

—ವಿನಾಯಕ ಅನಂತ ಹೆಗಡೆ, ಬೆಂಗಳೂರು

## ಹಸನು ಬದುಕಿಗೆ ಅಂಜಿಕೆಯೂ ಇರಲಿ

ಕಲರ್ಸ್ ಕನ್ನಡದ 'ಕನ್ನಡತಿ' ಬದಲಾದ ಕಾಲಘಟ್ಟಕ್ಕೆ ಅನುಗುಣವಾಗಿ ವಿಭಿನ್ನ ಕಥಾವಸ್ತು ಮತ್ತು ನಿರೂಪಣೆ ನೋಡುಗರಿಗೆ ಸ್ವಲ್ಪ ಬದಲಾವಣೆ ತಂದಿದೆ. ಇಲ್ಲಿ ಭುವಿ ಮತ್ತು ಹರ್ಷ ಇಬ್ಬರೂ ಅವಿವಾಹಿತರು. ತುಂಬಾ ವರ್ಷಗಳಿಂದ ಸ್ನೇಹಿತರು ಎನ್ನುವಂತೇನೂ ಇಲ್ಲ. ಆದಾಗ್ಯೂ ಹರ್ಷನ ಅನಾರೋಗ್ಯದ ನೆಪದಿಂದ ಒಂದೇ ಮನೆಯಲ್ಲಿ ವಾಸಿಸುತ್ತಾರೆ. ಆತನ ಮನಸ್ಸು ದುರ್ಬಲವಲ್ಲ, ಆಕೆಯ ಮನಸ್ಸೂ ಗಟ್ಟಿಯಾಗಿದೆ ಎಂಬುದು ಅವರ ನಂಬಿಕೆ. ಇಲ್ಲಿ ವಿದ್ಯಾವಂತ ಗಂಡು–ಹೆಣ್ಣು ಹೀಗೇ ವಿಶಾಲ ಮನಸ್ಸಿನಿಂದ ಯೋಚಿಸುವುದು ಈಗಿನ ಕಾಲಕ್ಕೆ ಸರಿ ಎನಿಸಿದರೂ ವಾಸ್ತವಕ್ಕೆ ದೂರವಾಗಿದೆ. ಕಾಲ ಎಷ್ಟೇ ಬದಲಾದರೂ ಮನುಷ್ಯನ ಮನಸ್ಸು ಒಂದೇ ತರಹ ಇರಲಾರದು. ಪರಿಸ್ಥಿತಿಗಳು ಬದಲಾಗುತ್ತಲೇ ಇರುತ್ತವೆ. ಇಬ್ಬರ ಮಧ್ಯೆ ನಂಬಿಕೆ ಗಟ್ಟಿ ಇದ್ದರೂ ಸಮಾಜ ನೋಡುವ ರೀತಿ ಬೇರೆ ಇರುತ್ತದೆ.

ಭುವಿ ಹರ್ಷ ಇಬ್ಬರೂ ನಾಳೆ ಸ್ನೇಹಿತರಾಗಿಯೇ ಬೇರೆಯಾಗಬಹುದು ಆದರೆ ಹರ್ಷನನ್ನು ಮದುವೆಯಾದವಳಾಗಲಿ, ಅಥವಾ ಭುವಿಯನ್ನು ಮದುವೆಯಾದವನಾಗಲಿ ಇದನ್ನು ಒಪ್ಪಿಕೊಳ್ಳದೇ ಇರಬಹುದು. ಆಗ ಸಂಸಾರದಲ್ಲಿ ಸಮಸ್ಯೆಗಳು ಉದ್ಭವಿಸಬಹುದಲ್ಲವೇ..?

—ಕಲ್ಪನಾ ಪ್ರಭಾಕರ ಸೋಮನಳ್ಳಿ, ಶಿರಸಿ

## ಆಯ್ಕೆಗೆ ಮಾನದಂಡ ಬೇಕು

ಸ್ಪರ್ಧಿಗಳಿಗೆ ಯಾವುದೇ ಅರ್ಹತೆ ಇಲ್ಲದಿದ್ದರೂ ಭಾಗವಹಿಸಬಹುದಾದ ಏಕೈಕ ರಿಯಾಲಿಟಿ ಶೋ ಅಂದರೆ ಚಂದನದ 'ಥಟ್ಟಂತ ಹೇಳಿ' ಕಾರ್ಯಕ್ರಮ. ಉತ್ತರ ಆಯ್ಕೆಗಳಿಗೂ ಕಾಯದೆ ಬಜರ್ ಒತ್ತುವುದು, ತಪ್ಪು ಉತ್ತರಗಳನ್ನು ಸಂಕೋಚವಿಲ್ಲದೆ ಹೇಳುವುದು, ಉತ್ತರ ಗೊತ್ತಿಲ್ಲದೆ ತಡಬಡಾಯಿಸುವುದು ಉತ್ತರ ಗೊತ್ತಿರುವವರ ಅವಕಾಶವನ್ನು ಹಾಳು ಮಾಡುವುದು ಸರ್ವೇಸಾಮಾನ್ಯ. ತಪ್ಪು ಉತ್ತರ ಕೊಟ್ಟವರಿಗೆ ದಂಡ ವಿಧಿಸಲೂ ಅವಕಾಶವಿಲ್ಲದ ಡಾ. ಸೋಮೇಶ್ವರ ಪರಿಸ್ಥಿತಿ ಶೋಚನೀಯ. ಈ ಕಾರ್ಯಕ್ರಮವನ್ನು ಯಾಂತ್ರಿಕವಾಗಿ ನಡೆಸುವ ಬದಲು ತಪ್ಪು ಮಾಡಿದವರಿಗೆ ಋಣಾತ್ಮಕ ಅಂಕ ನೀಡುವ ಮೂಲಕ ಕಾರ್ಯಕ್ರಮಕ್ಕೆ ಜೀವ ನೀಡಬಹುದಾಗಿದೆ.

—ರಾಮಚಂದ್ರ ಮಾರಳ್ಳಿ

## ಟೀವಿ ಅವಶ್ಯಕವೇ?

ಈ ಕೊರೊನಾ ಬಂದು ಮನುಷ್ಯ ಎಷ್ಟು ಅಲ್ಪ ತೃಪ್ತನಾಗಿ ಬದುಕಬಹುದು ಎಂಬುದನ್ನು ತಿಳಿಸಿದೆ. ಈ ಮನುಷ್ಯನ ಹೊಟ್ಟೆಗೆ ಆಹಾರ ಮೈಗೆ ಬಟ್ಟೆ ಇದ್ದರೆ ಸಾಕು ಎನ್ನುವ ಸ್ಥಿತಿ ಒದಗಿದೆ. ಸಿನಿಮಾ ನಟರು ಕ್ರೀಡಾಪಟುಗಳು ರಾಜಕಾರಣಿಗಳಿಂದ ಸಾಮಾನ್ಯರಿಗೆ ಏನೂ ಪ್ರಯೋಜನವಿಲ್ಲ ಎಂಬುದು ಸಾಬೀತಾಗಿದೆ. ಇನ್ನು ಜನರಲ್ಲಿ ಭಯ ಹುಟ್ಟಿಸುವ ಸುದ್ದಿ ವಾಹಿನಿಗಳು ಸರಿಯಾಗಿ ಮಾರ್ಗದರ್ಶನದಿಂದ ಮೂಢನಂಬಿಕೆ ಅಂಧಕಾರದ ವಿಮೋಚನೆಯ ದರ್ಶನ ಮಾಡಿಸಬೇಕಾದವರು ಸಾವು– ನೋವಿನ ವೈಭವೀಕರಣ ಮಾಡುತ್ತಿವೆ. ಹೀಗಿರುವಾಗ ಈಗ ಟೀವಿಗಳ ಅವಶ್ಯಕತೆ ಇದೆಯೇ ಅನಿಸುತ್ತಿದೆ.

—ಶೈಲಾ ಜೋಷಿ

## ಮಲ್ಲಿಗೆ ಕಂಪಿನ ಜೊತೆ ಜೊತೆಯಲಿ

ಝೀ ಕನ್ನಡದ 'ಜೊತೆಜೊತೆಯಲಿ' ಚೆನ್ನಾಗಿ ಮೂಡಿಬರುತ್ತಿದೆ. ಈಚೆಗಿನ ಮಲ್ಲಿಗೆಹೂವಿನ ಮಹತ್ವ ಹೇಳಿದ್ದು, ತಾಯಿ ಮಗನ ಆತಂಕ ದೂರಮಾಡಲು ಅಮ್ಮನವರ ದರ್ಶನ ಮಾಡಿದ್ದು ತುಂಬಾ ಚೆನ್ನಾಗಿತ್ತು.

— ಸೀತಾಕೇಶವ, ಸಿದ್ದಿ